ಗುರಿ ಇಟ್ಟುಕೊಂಡು ಕೆಲಸ ಪ್ರಾರಂಭ ಮಾಡಿದ್ದಾರೆ. ಅವರಿಗೆ ಗೊತ್ತಿದೆ. ಅವರು ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಮೇಲೆ ಅವರ ಆರೋಪ. ಈ ಆರೋಪಗಳ ಬಗ್ಗೆ ಹಿಂದೆ ಸಹ ವಿಚಾರಣೆ ಮಾಡಿ ಆಗಿದೆ. ಮತ್ತೊಂದು ಸಾರಿ ಮಾಹಿತಿ ತರಿಸಿಕೊಡಬೇಕೆಂದರೆ ಮಾಹಿತಿ ತರಿಸಿಕೊಡುವಂತಹ ಕೆಲಸ ಮಾಡುತ್ತೇನೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸಚಿವರು ಇನ್ನೂ ಮೇಲಿನ ಅಧಿಕಾರಕ್ಕೆ ಹೋಗುವವರಿದ್ದಾರೆ. ಯಾವ ಅಧಿಕಾರಿ ಮೇಲೆ ನಾನು ಆರೋಪ ಮಾಡುತ್ತಿಲ್ಲ. ಸುಮಾರು ಒಂದು ಕೋಟಿ ರೂ. ಏನು ಖರ್ಚು ಮಾಡಿದ್ದಾರೆ, ಆ ಎಸ್.ಸಿ. ಎಸ್.ಟಿ. ಜನರಿಗೆ ಅನುಕೂಲ ಆಗಲಿ ಎಂದು ನಾನು ಈ ವಿಷಯ ಎತ್ತುತ್ತಿದ್ದೇನೆ ಹೊರತು ಇದರಲ್ಲಿ ಬೇರೆ ಉದ್ದೇಶ ಇಲ್ಲ, ಇದು ಏನು ಮಾಡಿದ್ದಾರೆಂದರೆ, ಸ್ಟೇಟ್ ಹೈವೇ ಮೇಲೆ ಕ್ರಿಯಾ ಯೋಜನೆ ಮಾಡಿ ಆ ಮೇಲೆ MDR ಮತ್ತು state highway maintenance ಗಾಗಿ ಏನು ದುಡ್ಡು ಬರುತ್ತದೆ ಆ ದುಡ್ಡು ಖರ್ಚು ಮಾಡಿದ್ದಾರೆ. ತಾವು ಬೇಕಾದರೆ enquiry ಮಾಡಿ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಮಾಹಿತಿ ತರಿಸಿ ಅವರಿಗೆ ಉತ್ತರ ಕೊಡುತ್ತೇನೆ.

ತೋಟಗಾರಿಕೆ ಇಲಾಖೆಯಲ್ಲಿ ಮರು ವಿಂಗಡಣೆಯ ಬಗ್ಗೆ

72(553) ಶ್ರೀ ನರೆಂದ್ರ ಬಾಬು ನೆ ಲ:(ಮಹಾಲಕ್ಷ್ಮೀ ಲೇಔಟ್) ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಯಲ್ಲಿ ಮರು ವಿಂಗಡಣೆ ಅವಶ್ಯಕತೆಯೇನು, ಮರು ವಿಂಗಡಣೆಯನ್ನು ವೈಜ್ಞಾನಿಕ ಮಾನದಂಡಗಳನ್ವಯ ಮಾಡಲಾಗಿದೆಯೇ? (ವಿವರ ನೀಡುವುದು)

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರಕ್ಕೆ ಯಾವುದಾದರೂ ವರದಿಯನ್ನು ಸಲ್ಲಿಸಲಾಗಿದೆಯೇ (ವರದಿ ಪ್ರತಿ ನೀಡುವುದು)

ಇ) ಮರು ವಿಂಗಡಣೆಯನ್ನು ಋತು ಮಾಸದಲ್ಲಿ ಮಾಡುತ್ತಿರುವುದರಿಂದ, ತೋಟಗಾರಿಕೆ ಯೋಜನೆಗಳ ಅನುಷ್ಠಾನದ ಮೇಲೆ ದುಷ್ಪರಿಣಾಮವಾಗುವುದಿಲ್ಲವೇ (ವಿವರ ನೀಡುವುದು)

ಶ್ರೀ ಉಮೇಶ ವಿ. ಕತ್ತಿ(ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು):

ಅ) ಪ್ರಸ್ತುತ ತೋಟಗಾರಿಕೆ ಇಲಾಖೆಯಲ್ಲಿ ಎ ಮತ್ತು ಬಿ ವೃಂದದಲ್ಲಿ ಅನೇಕ ತಾಂತ್ರಿಕ ಹುದ್ದೆಗಳು ಖಾಲಿ ಇದ್ದು, ಹಾಲಿ ಲಭ್ಯವಿರುವ, ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಂಡು ಇಲಾಖಾ ಕೆಲಸಗಳನ್ನು ಸುವ್ಯವಸ್ಥೆಗೊಳಿಸುವ ದೃಷ್ಟಿಯಿಂದ ಮರು ವಿಂಗಡಣೆಯ ಅವಶ್ಯಕತೆ ಇದೆ.. ಎಲ್ಲಾ ರೈತ ಸಂಪರ್ಕ ಕೇಂದ್ರಗಳು (ಹೋಬಳಿ ಮಟ್ಟದಲ್ಲಿ), ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಅಧಿಕಾರಿಗಳ ಹುದ್ದೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಭರ್ತಿ ಮಾಡಿ ರೈತರಿಗೆ ಅಗತ್ಯ ನೆರವು ನೀಡುವ ತೀವ್ರ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿ ದೃಷ್ಟಿಯಿಂದ ಈಗ ಇರುವ ಅಧಿಕಾರಿಗಳ ಮರುವಿಂಗಡನೆಮ ಅವಶ್ಯಕತೆ ಇರುತ್ತದೆ.

ಈ ಹಿನ್ನಲೆಯಲ್ಲಿ ತೋಟಗಾರಿಕೆ ಇಲಾಖೆಯ ಮರು ವಿಂಗಡಣೆಯ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ. ಮರು ವಿಂಗಡಣೆಯ ಹೋಬಳಿ: ತಾಲ್ಲೂಕು: ಜಿಲ್ಲಾ ಮತ್ತು ನಿರ್ದೇಶನಾಲಯ ಒಟ್ಟು 4 ಹಂತಗಳಲ್ಲಿ ಅಧಿಕಾರಿಗಳನ್ನು ಅವಶ್ಯಕತೆ ಅನ್ವಯ ಪುನರ್ ಹಂಚಿಕೆ ಮಾಡಿ ವೈಜ್ಞಾನಿಕ ರೀತಿಯಲ್ಲಿ ಮರು ವಿಂಗಡಣೆ ಮಾಡಲು ಪ್ರಸ್ತಾಪಿಸಲಾಗಿದೆ. ಪ್ರಸ್ತಾವನೆಯು ಇನ್ನು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ಬಗ್ಗೆ ನಿರ್ದಿಷ್ಟ ಯಾವುದೇ ವರದಿ ಇರುವುದಿಲ್ಲ. ಮರು ಹಂಚಿಕೆ ಬಗ್ಗೆ ಪ್ರಸ್ತಾವನೆಯನ್ನು ಮಾತ್ರ ಪರಿಶೀಲನೆಯಲ್ಲಿದೆ.

ಇ) ಇಲ್ಲ

ಈ ಮರುವಿಂಗಡಣೆಯಿಂದ ಇಲಾಖೆಯ ಯೋಜನಾ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅವಕಾಶವಾಗುತ್ತದೆ.

ಶ್ರೀ ನೆ ಲ ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಅವರು ಒದಗಿಸಿರುವ ಉತ್ತರದಲ್ಲಿ ಅನೇಕ ತಾಂತ್ರಿಕ ಹುದ್ದೆಗಳು ಖಾಲಿ ಇದ್ದು ಎಂದು ಹೇಳಿದ್ದಾರೆ, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುವುದೇ ಅಥವಾ ಆ ಹುದ್ದೆಗಳಿಗೆ ಈಗಾಗಲೇ ನೇಮಕಾತಿ ಆಗಿ ಹೋಗಿದೆಯೋ, ರೈತರ ಹಿತದೃಷ್ಟಿಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ

ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಿಕ್ಕೆ ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಿದ್ದೀರಿ. Re organization ಮಾಡತಕ್ಕಂತಹ ಉದ್ದೇಶ ಇದರಿಂದ ಏನು ಪ್ರಯೋಜನೆ, ಇದರ ಉದ್ದೇಶ ಏನು? ಹಿಂದೆ ಸಹ ಡಿವಿಷನ್ಸ್ ಎಂದು ಇತ್ತು.. ಈಗ ಅದು ವೈಂಡ್ ಅಪ್ ಆಯಿತು. ಇದನ್ನು ಮತ್ತೇ ಪುನ: ಮಾಡುತ್ತಿರತಕ್ಕಂತಹ ಉದ್ದೇಶವೇನು ಎಂದು ನಾನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ. Re organization ಮಾಡುವುದಕ್ಕೆ ಹೊರಟಿರುವುದು ರೈತರ ಹಿತದೃಷ್ಟಿಯಿಂದನೋ ಅಥವಾ ಬೇರೆ ಹಿತದೃಷ್ಟಿಯಿಂದನೋ ಎನ್ನತಕ್ಕಂಥದ್ದು ಅದು ಯಾವ ರೀತಿ ಪ್ರಯೋಜನ ಆಗುತ್ತದೆ ಎಂದು ದಯವಿಟ್ಟು ಹೇಳಬೇಕು. ಖಾಲಿ ಇರತಕ್ಕಂತಹ ಹುದ್ದೆಗಳನ್ನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ವರ್ಗಾವಣೆ ಮಾಡುವುದು ಎಷ್ಟು ಸರಿ? ಈಗ ಶಾಲೆ ಕಾಲೇಜುಗಳು ಪ್ರಾರಂಭವಾಗಿವೆ. ಇದು ಅನ್ ಸೀಸನ್. ಅದು ಸೂಕ್ತವೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಶೇಕಡ 3ರಷ್ಟು ವರ್ಗಾವಣೆ ಮಾಡಿ ರಿ ಅಪ್ರಾಪ್ರಿಯೇಟ್ ಮಾಡಲಿಕ್ಕೆ ಅವಕಾಶವಿರುತ್ತದೆ. ಈ ಸಂದರ್ಭದಲ್ಲಿ ವಿಭಾಗವನ್ನು ಮಾಡಲಿಕ್ಕೆ ಹೊರಟಿರುವುದು ಸೂಕ್ತವೇ ಎಂದು ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ಉಮೇಶ್ ಎ ಕತ್ತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಹಿಂದಿನಿಂದ ಈ ಇಲಾಖೆಯಲ್ಲಿ ಸತತವಾಗಿ ನೇಮಕಾತಿ ಮಾಡುವ ಕ್ರಮ ಜಾರಿಯಲ್ಲಿದೆ. ಆದರೆ graduates ಕಡಿಮೆ ಇರುವುದರಿಂದ ತುಂಬುವುದಕ್ಕಾಗುತ್ತಿಲ್ಲ. ಈಗ ಸದ್ಯಕ್ಕೆ KPSC ಯಿಂದ ಏನು ನೇಮಕಾತಿಗಳು ಆಗುತ್ತಿವೆ 153 ಸೀಟ್‌ಗಳಿಗೆ ಅರ್ಜಿಗಳನ್ನು ಅಹ್ವಾನಿಸಿದರೆ 149 ಜನ ಅರ್ಜಿಗಳನ್ನು ಹಾಕಿದ್ದಾರೆ. Graduates ಕಡಿಮೆ ಇರುವುದರಿಂದ ಅಷ್ಟೊಂದು ಫಿಲ್ ಅಪ್ ಮಾಡುವುದಕ್ಕಾಗುತ್ತಿಲ್ಲ. ಎರಡನೆಯದು ಇವತ್ತು ತೋಟಗಾರಿಕಾ ಇಲಾಖೆಯಲ್ಲಿ ಹೋಬಳಿ ಮಟ್ಟ, ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟಗಳಲ್ಲ ಪ್ರಬಲವಾಗಿ ಮಾಡಿ ಆ ಭಾಗದ ರೈತರು ಹೆಚ್ಚಿನ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡುವಂತಹ ಕಾರ್ಯಕ್ರಮವನ್ನು ರೂಪಿಸಿ ಈ ಇಲಾಖೆಯನ್ನು ಮರುವಿಂಗಡಣೆ ಮಾಡುವಂತಹ ಕಾರ್ಯಕ್ರಮವನ್ನು ಪರಿಶೀಲನೆ ಮಾಡುತ್ತಿದ್ದೇವೆ. ಇದರ ಜೊತೆ ರಾಜ್ಯದಲ್ಲಿ ತಮಗೆ

ಗೊತ್ತಿರುವ ಹಾಗೆ NREG ರಾಷ್ಟ್ರೀಯ ಸ್ವಯಂ ಉದ್ಯೋಗ ಖಾತರಿ ಯೋಜನೆಯಲ್ಲಿಯೂ ತೋಟಗಾರಿಕೆ ಇಲಾಖೆಯಿಂದ ಸಾಕಷ್ಟು plantation ಮಾಡುವಂತಹ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯಿತಿ ಮುಖೇನ ಮಾಡುತ್ತಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ ಅಧಿಕಾರಿಗಳು ಇಲ್ಲದೇ ಇರುವುದರಿಂದ ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. 60 ಕೋಟಿ ಅಷ್ಟು RKUY ಬಂದಿದೆ. ಈ ಇಲಾಖೆ ಇವತ್ತು ದೊಡ್ಡದಾಗಿ ಬೆಳೆಯುತ್ತಿರುವಂತಹ ಸಂದರ್ಭದಲ್ಲಿ ತಾಲ್ಲೂಕು ಮಟ್ಟದಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ ಅಧಿಕಾರಿಗಳು ಬೇಕಾಗಬಹುದು ಎಂಬ ದೃಷ್ಟಿಯಿಂದ re organization ಮಾಡುತ್ತಿದ್ದೇವೆ. ಹೊಸ ಹುದ್ದೆಗಳನ್ನು ಸೃಷ್ಟಿ ಮಾಡುತ್ತಿಲ್ಲ. ಇರುವಂತಹ ಹುದ್ದೆಗಳನ್ನು ಸರಿಯಾಗಿ ಮಾಡಿ ಆ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹೋಬಳಿ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ರೈತರಿಗೆ ಸರಿಯಾದ ರೀತಿಯಲ್ಲಿ ಕಾರ್ಯಕ್ರಮಗಳು ಮುಟ್ಟಬೇಕೆಂಬ ದೃಷ್ಟಿಯಿಂದ ಈ ಕಾರ್ಯಕ್ರಮ ಮಾಡಿದ್ದೇವೆ. ಇದರಲ್ಲಿ ಬೇರೆ ಯಾವುದೇ ಉದ್ದೇಶ ಇಟ್ಟುಕೊಂಡಿಲ್ಲ. ಇದನ್ನು ಮಾಡುವುದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಹೊರೆ ಆಗುವುದಿಲ್ಲ. ಇರುವಂತಹ ಹುದ್ದೆಗಳನ್ನು ಮರುವಿಂಗಡಣೆ ಮಾಡಿ ಆ ಜಿಲ್ಲೆ ಮಟ್ಟದಲ್ಲಿ ಕೊಡುತ್ತಿದ್ದೇವೆ. ಬೆಳಗಾಂನಿಂದ ತೆಗೆದು ಕೋಲಾರಕ್ಕೆ ಹಾಕುತ್ತಿಲ್ಲ. ಕೋಲಾರದ ಹುದ್ದೆಗಳನ್ನು ಮಂಗಳೂರಿಗೆ ತೆಗೆದುಕೊಂಡು ಹೋಗುತ್ತಿಲ್ಲ. ಆಯಾ ಜಿಲ್ಲೆಗಳಲ್ಲಿ ಇದ್ದಂತಹ ಹುದ್ದೆಗಳನ್ನು ಅದೇ ಜಿಲ್ಲೆಗಳಲ್ಲಿ ಮರು ವಿಂಗಡಣೆ ಮಾಡಿ ಅವರಿಗೆ ಸರಿಯಾದ ತಾಲ್ಲೂಕು ಮಟ್ಟದ ಅಧಿಕಾರಿ, ಹೋಬಳಿ ಮಟ್ಟದ ಅಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಈ ರೀತಿ ಮಾಡಿದಾಗ NERG ಮತ್ತು RKUY ಮತ್ತು ತೋಟಗಾರಿಕೆ ಇಲಾಖೆಯಿಂದ ಬರತಕ್ಕಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಹಳ ಸಮರ್ಪಕವಾಗಿ ರೈತರಿಗೆ ಮುಟ್ಟಿಸುವಂತಹ ಕಾರ್ಯಕ್ರಮದಲ್ಲಿ ಮರು ವಿಂಗಡಣೆ ಕಾರ್ಯಕ್ರಮವನ್ನು ಪರಿಶೀಲನೆ ಮಾಡುತ್ತಿದ್ದೇವೆ. ಆದಷ್ಟು ಬೇಗ ಇದನ್ನು ಪರಿಶೀಲನೆ ಮಾಡಿ ಸರಿಯಾದ ರೀತಿಯಲ್ಲಿ ಮಾಡಿದರೆ ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆ. ಅದರ ಜೊತೆಗೆ ಅಧಿಕಾರಿಗಳೂ ಒಳ್ಳೆಯ ಕೆಲಸ ಮಡುವುದಕ್ಕೆ

ಸಾಧ್ಯವಾಗುತ್ತದೆ ಎನ್ನುವ ದೃಷ್ಟಿಯಿಂದ ಮರು ವಿಂಗಡಣೆ ಮಾಡುವಂತಹ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ.

ಶ್ರೀ ನೆ ಲ ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಕಾರ್ಯಕ್ರಮ ಪರಿಣಾಮಕಾರಿಯಾಗಿ ಮಾಡಬೇಕೆಂದು ಇದೆ. ನನಗೆ ಒಂದು ಶಂಕೆ ಮತ್ತು ಸಂಶಯ ಬರುವುದು ಏನೆಂದರೆ, ಹಿಂದೆ ಡಿವಿಷನ್ ವೈಂಡ್ ಅಪ್ ಮಾಡಿದ್ದರು. ಈ ಸೀಸನ್‌ನಲ್ಲಿ ಪುನರ್ ವಿಂಗಡಣೆ ಮಾಡುವುದಕ್ಕೆ ಹೋದಾಗ ಹೋಲ್‌ಸೆಲ್ transferಗಳು ಹೋದಾಗ ಬಹಳಷ್ಟು ಬೇರೆ ಬೇರೆ ರೀತಿಯ ದುರುಪಯೋಗ ಆಗತಕ್ಕಂತಹ ಅವಕಾಶಗಳಿರುತ್ತವೆ. ಈ ಒಂದು ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಇದನ್ನು ಪುನರ್ ಪರಿಶೀಲಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಪ್ರಸ್ತಾವನೆ ಏನೆಂದು ಕೇಳಿದ್ದೆ, ಸರ್ಕಾರಕ್ಕೆ ಏನು ವರದಿ ಸಲ್ಲಿಸಿದ್ದೀರಿ ಎಂದು ಕೇಳಿದ್ದೆ, ಏನು ವರದಿ ಸಲ್ಲಿಸಿದ್ದೀರಿ, ಯಾವ ಉದ್ದೇಶಕ್ಕೋಸ್ಕರ, ಚುಕ್ಕೆ ಗುರುತಿನ ಪ್ರಶ್ನೆಯಲ್ಲಿ ಸವಿಸ್ತಾರವಾಗಿ ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ, ಒಟ್ಟಾರೆ NREG ಇರಬಹುದು, NRHM ಇರಬಹುದು, ರೈತ ತಾನು ಬೆಳೆಯತಕ್ಕಂತಹ ಬೆಳೆಗಳಿಗೆ ಅಧಿಕಾರಿಗಳ ಮಾರ್ಗದರ್ಶನದ ಕೊರತೆಯಿಂದ ಅವನು ಮಾರ್ಗದರ್ಶನ ಪಡೆಯುವುದಕ್ಕಾಗುತ್ತಿಲ್ಲ ಸಂಪೂರ್ಣವಾಗಿ ನಿಮ್ಮ ಉದ್ದೇಶ ಒಪ್ಪುತ್ತೇನೆ. ಅಧಿಕಾರಿಗಳು ವರ್ಗಾವಣೆ ದಂಧೆಗೆ ಬಲಿ ಆಗಬಾರದು, ಈ ಒಂದು ನೆಪ ಇಟ್ಟುಕೊಂಡು ಹೋಲ್ ಸೇಲ್ ವರ್ಗಾವಣೆಗೆ ಅವಕಾಶ ಕೊಡಬಾರದು as it is 3% ವರ್ಗಾವಣೆ ಮಾಡುವುದಕ್ಕೆ ಈ ಸಂದರ್ಭದಲ್ಲಿ ಅವಕಾಶವಿದೆ. ಮಾನ್ಯ ಮಂತ್ರಿಗಳು ಈ ವಿಷಯವನ್ನು ಗಮನಿಸಬೇಕು. ಪ್ರಸ್ತಾವನೆ ಎಂದು ಏನು ಉತ್ತರ ಕೊಟ್ಟಿದ್ದೀರಿ ಅದರ ಮಾಹಿತಿಯನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಉಮೇಶ್ ವಿ ಕತ್ತಿ: ಡಿವಿಷನ್‌ಗಳಲ್ಲಿ ಅಧಿಕಾರಿಗಳು ಹಾಕುವ ಬಗ್ಗೆ ಮಾನ್ಯ ಸದಸ್ಯರು ಗಮನಸೆಳೆದಿದ್ದಾರೆ, ಹಿಂದೆ ತೋಟಗಾರಿಕೆ ಇಲಾಖೆಯಲ್ಲಿ ರಾಜ್ಯ ಮತ್ತು ಕೇಂದ್ರ ಬಜೆಟ್ ಎಲ್ಲಾ ಕೂಡಿದಾಗ 50 ರಿಂದ 60 ಕೋಟಿ ಅಷ್ಟು ಇದ್ದಾಗ ಈ ಎಲ್ಲಾ ಹುದ್ದೆಗಳು ಬೆಂಗಳೂರಿನ ಮಟ್ಟದಲ್ಲಿ ಶಿಫ್ಟ್ ಆಗಿದ್ದವು. ಅವುಗಳು ನಂಜುಂಡಪ್ಪ ವರದಿ ಪ್ರಕಾರ ಬೆಂಗಳೂರಿನಲ್ಲಿಯೇ ಇರಬೇಕೆಂದು ಹೇಳಿ ತೀರ್ಮಾನಗಳಾಗಿವೆ. ಆದರೂ NREG, RKAYU NHM ಅವು State

Sector ನಿಂದ ಆಗತಕ್ಕಂಥ ಯೋಜನೆಗಳು ಸರಿಯಾದ ರೀತಿಯಲ್ಲಿ ಅನುಷ್ಠಾನವಾಗಬೇಕು. ಅದರ ಮೇಲೆ ಇನ್ಸ್‌ಪೆಕ್ಷನ್‌ಗಳಾಬೇಕು. ಆಮೇಲೆ ಕೆಲವು sanctioning authority ಅಲ್ಲೇ ಲೋಕಲ್‌ನಲ್ಲಿ ಬೇಗ ಬೇಗ ಆಗಬೇಕು ಎನ್ನುವ ದೃಷ್ಟಿಯಿಂದ ಈ ಡಿವಿಶನ್‌ಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಇದನ್ನು ಬಿಟ್ಟರೆ ಬೇರೆ ಉದ್ದೇಶ ಇದರಲ್ಲಿ ಇಲ್ಲ. ಇನ್ನು ತೋಟಗಾರಿಕೆ ಬೆಳೆಗಳ ಬಗ್ಗೆ ಕಳೆದ ಮೂರು ವರ್ಷಗಳ ಅಂಕಿ ಅಂಶಗಳನ್ನು ನೋಡಿದಾಗ ಪ್ರತಿ ವರ್ಷ ಒಂದು ಲಕ್ಷಕ್ಕಿಂತ ಹೆಚ್ಚು ಹೆಕ್ಟೇರ್ ಪ್ಲಾಂಟೇಶನ್ ಆಗುತ್ತಿದೆ. ಇವು ಸರಿಯಾದ ರೀತಿಯಲ್ಲಿ ಪ್ಲಾಂಟೇಶನ್ ಆಗಬೇಕು. ರೈತರಿಗೆ ಸರಿಯಾದ ಸಲಹೆಗಳು ಸಿಗಬೇಕೆನ್ನುವ ದೃಷ್ಟಿಯಿಂದ ನಾವು ಕಾಯಕ್ರಮಗಳನ್ನು ರೂಪಿಸಿದ್ದೇವೆಯೇ ವಿನ: ಬೇರೆ ಯಾವ ಉದ್ದೇಶದ ಯೋಜನೆಯೂ ಇದರಲ್ಲಿ ಇಲ್ಲ. ಯಾವುದೇ ಅಧಿಕಾರಿಗೂ ಇದರಿಂದ ತೊಂದರೆಯಾಗುತ್ತದೆ ಎನ್ನುವುದು ಮತ್ತು ಅಧಿಕಾರಿಗಳ ವರ್ಗಾವಣೆ ಮಾಡುವ ಉದ್ದೇಶವು ಇದರಲ್ಲಿ ಇಲ್ಲ. ಈಗ ನೀವೇ ಹೇಳಿದಂತೆ 3% ವರೆಗೂ ವರ್ಗಾವಣೆ ಮಾಡುವುದಕ್ಕೆ ಅಧಿಕಾರವಿದೆ. ಆದರೂ ಕೂಡ ನಮ್ಮ ಇಲಾಖೆಯಲ್ಲಿ ಯಾವುದೇ ವರ್ಗಾವಣೆಯನ್ನು ಮಾಡುತ್ತಿಲ್ಲ. ಏಕೆಂದರೆ ಅಧಿಕಾರಿಗಳ ಮಕ್ಕಳು ಕೂಡ ಶಾಲೆಗೆ ಹೋಗುವವರು ಇರುತ್ತಾರೆ. ಆದ ಕಾರಣ ಅವರಿಗೂ ಕೂಡ ತೊಂದರೆ ಮಾಡಬಾರದೆಂದು ನಾವು ಚಿಂತನೆಯನ್ನು ಮಾಡಿದ್ದೇವೆ. ಇದರ ಜೊತೆ ರೈತರಿಗೆ ಸಲಹೆಗಳನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಉತ್ತಮವಾಗಿ ಜಾರಿಗೆ ತರಬೇಕೆಂದು ಹೇಳಿಯೇ ನಾವು ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ. ಇದರಿಂದ ಯಾವುದೇ ರೀತಿಯ ತೊಂದರೆಯೂ ಯಾರಿಗೂ ಆಗುವುದಿಲ್ಲ. ವರದಿ ಈಗ ಸಿದ್ಧವಾಗುತ್ತಿದೆ. ಅದು ಸಿದ್ಧವಾದ ಮೇಲೆ ಅದರ ಪ್ರತಿಯನ್ನು ತಮಗೆ ಕಳುಹಿಸುವಂಥ ಕೆಲಸವನ್ನು ಮಾಡುತ್ತೇವೆಂದು ತಮಗೆ ಹೇಳಬಯಸುತ್ತೇನೆ.

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮಂಡನೆ:

ಅಧ್ಯಕ್ಷರು:– ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 2ನೇ ಜುಲೈ 2010ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ

49 ಪ್ರಶ್ನೆಗಳ ಪೈಕಿ 47 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ-ಅ)

ಅಧ್ಯಕ್ಷರು: ಮಂಡಿಸಲಾಯಿತು. ಈಗ ಚುನಾವಣಾ ಪ್ರಸ್ತಾವನ್ನು ಮಂಡಿಸುವುದು. ಮಾನ್ಯ ಕಾನೂನು ಸಚಿವರು ಮಂಡಿಸಬೇಕು.

2. ಚುನಾವಣಾ ಪ್ರಸ್ತಾವ:

ಶ್ರೀ ಸಿ ಎಂ ಉದಾಸಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995 ಅನ್ನು ಅನುಷ್ಠಾನಗೊಳಿಸಲು ರಚಿಸಲಾಗಿರುವ ರಾಜ್ಯ ಸಮನ್ವಯ ಸಮಿತಿಗೆ, ಅಂಗವಿಕಲರ ಅಧಿನಿಯಮದ ಕಲಂ 13(2)(ಜಿ) ರಲ್ಲಿನ ಅವಕಾಶದಂತೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು. ಈ ನಿಯಮ 69 ರ ಮೇರೆಗೆ ಚರ್ಚೆ. ವಿರೋಧ ಪಕ್ಷದ ನಾಯಕರು ಮಾತನಾಡಬೇಕು. ಈಗಾಗಲೇ 1 ಗಂಟೆ 39 ನಿಮಿಷಗಳವರೆಗೆ ಚರ್ಚೆಯಾಗಿದೆ.

3. ನಿಯಮ 69ರ ಮೇಲೆ ಮುಂದುವರಿದ ಚರ್ಚೆ:

ವಿಷಯ: **ಲೋಕಾಯುಕ್ತರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿರುವ ಬಗ್ಗೆ.**

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರು ಇದರಲ್ಲಿ ನೀವು ಟೈಂ ರಿಸ್ಟ್ರಿಕ್ಟ್ ಮಾಡಬೇಡಿ.

ಅಧ್ಯಕ್ಷರು: ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡಬೇಕು.

ಶ್ರೀ ಸಿದ್ದರಾಮಯ್ಯ: ಅವರು ಯಾವಾತ್ತಾದರೂ ಉತ್ತರ ಕೊಡಲಿ. ಸೋಮವಾರವಾದರೂ ಕೊಡಲಿ ಅಥವಾ ಮಂಗಳವಾರವಾದರೂ ಕೊಡಲಿ. ಸೋಮವಾರ ಬಹಳ ಸದಸ್ಯರು ಇನ್ನೂ ಮಾತನಾಡುವವರು ಇದ್ದಾರೆ. ಆ ಕಡೆಯವರು ಮಾತನಾಡಬೇಕು ಮತ್ತು ಈ ಕಡೆಯವರು ಕೂಡ ಮಾತನಾಡಬೆಕು. ಆದುದರಿಂದ ಮಂಗಳವಾರ ಮುಖ್ಯಮಂತ್ರಿಗಳು ಉತ್ತರ ಕೊಡುವಂತೆ ನೀವು ಅವರಿಗೆ ಹೇಳಿ. ಮಾನ್ಯ ಮುಖ್ಯಮಂತ್ರಿಗಳೇ ನಿನ್ನೆಯ ದಿವಸ ಮಾತನಾಡುವಾಗ

0-242-45